




ಮಾಡಿಕೊಳ್ಳುತ್ತೇನೆ. ನಂತರ ನನ್ನಿಷ್ಟದ ಸಿನಿಮಾ ಮಾಡುತ್ತೇನೆ' ಎಂದು ಸಮರ್ಥಿಸಿಕೊಳ್ಳುವವರೂ ಇದ್ದಾರೆ. ಆದರೆ ಒಮ್ಮೆ ಸಿದ್ಧಸೂತ್ರಗಳ ಸಿನಿಮಾಹಳಿಗೆ ಹತ್ತಿದವರು ಮತ್ತೆ ಅವರಿಷ್ಟದ ಭಿನ್ನ ದಾರಿಗೆ ಮರಳುವುದು ತುಂಬ ಕಡಿಮೆ. 'ಹೀಗೆಯೇ ನಮ್ಮ ಎಷ್ಟೋ ಪ್ರತಿಭಾವಂತ ಸಿನಿಮಾಕರ್ತರನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ' ಎನ್ನುತ್ತಾರೆ ಹರೀಶ್.

## ಸ್ಟಾರ್ ನಟರ ಭಯ!

ಕನ್ನಡದ ಸ್ಟಾರ್ ನಟರದ್ದು ಒಬ್ಬೊಬ್ಬರದೂ ಒಂದೊಂದು ಮಾದರಿ. ಧ್ರುವ ಸರ್ಜಾ ಅವರ ಉದಾಹರಣೆ ತೆಗೆದುಕೊಳ್ಳುವುದಾದರೆ, ತಮ್ಮ ಎಲ್ಲ ಸಿನಿಮಾಗಳಲ್ಲಿಯೂ ಅವರು ಉಸಿರುಗಟ್ಟಿಕೊಂಡು ಉದ್ದುದ್ದ ಡೈಲಾಗ್ ಹೇಳುತ್ತಾರೆ. ದರ್ಶನ್ ಸಿನಿಮಾದಲ್ಲಿ ಹತ್ತಿಪ್ಪತ್ತು ಕಾರು ಆಕಾಶಕ್ಕೆ ಹಾರಬೇಕು. ಯಶ್ ಸಿನಿಮಾದಲ್ಲಿ ದೂಳೆಬ್ಬಿಸುವ ಆ್ಯಕ್ಷನ್ ಇರುತ್ತದೆ. ಗಣೇಶ್ ಎಂದರೆ ತೆಳು ಕಾಮಿಡಿ–ಭಗ್ನಪ್ರೇಮ, ದುನಿಯಾ ವಿಜಿ ಸಿನಿಮಾದಲ್ಲಿ ದವಡೆಕಚ್ಚಿ ಬಂಡೆಗಲ್ಲು ಪುಡಿಗಟ್ಟುವ ಒಂದಾದರೂ ದೃಶ್ಯ ಇದ್ದೇ ಇರುತ್ತದೆ. ಪುನೀತ್ ಎಂದರೆ ಫ್ಯಾಮಿಲಿ ಸೆಂಟಿಮೆಂಟ್... ಹೀಗೆ ಎಲ್ಲ ಸ್ಟಾರ್ ನಟರೂ ತಮ್ಮದೇ ವೃತ್ತದೊಳಗೆ ಅದದೇ ಆಟವಾಡುತ್ತಾ ಇದ್ದಾರೆ. ಅದರಾಚೆಗೆ ನೋಡುವ ಯೋಚಿಸುವ, ತಮ್ಮ ಸಿದ್ಧ ಇಮೇಜ್‌ಗೆ ವ್ಯಾಯಾಮ ಮಾಡಿಸಿ ಹೊಸ ಆಯಾಮ ಕಂಡುಕೊಳ್ಳುವ 'ರಿಸ್ಕ್' ತೆಗೆದುಕೊಳ್ಳಲು ಯಾರೂ ಸಿದ್ಧರಿಲ್ಲ. ಹೀಗಾಗಿ ಅವರು ಮಾಡುವ ಬಹುತೇಕ ಎಲ್ಲ ಸಿನಿಮಾಗಳೂ ಒಂದೇ ಆಗಿರುತ್ತದೆ. ಧ್ರುವ ಸರ್ಜಾ ಮೂರು ಸಿನಿಮಾಗಳನ್ನೂ ಒಂದರ ಪಕ್ಕ ಇನ್ನೊಂದಿಟ್ಟರೆ ಕಾಣುವ ಬದಲಾವಣೆ ನಾಯಕಿಯರೊಂದೇ! 'ಸಂಗೊಳ್ಳಿ ರಾಯಣ್ಣ' ಎಂಬ ಐತಿಹಾಸಿಕ ಸಿನಿಮಾದಲ್ಲಿಯೂ ನಮಗೆ ಕಾಣುವುದು ಮಾಸ್‌ಹೀರೊ ದರ್ಶನ್ ಅವರೇ!

'ನಮ್ಮ ಬಹುತೇಕ ಜನಪ್ರಿಯ ನಿರ್ದೇಶಕರು ಮಾರುಕಟ್ಟೆಯಲ್ಲಿ ಮಾರಾಟ ಆಗುವ ಕೆಲವು ಸಂಗತಿಗಳನ್ನೇ ಮತ್ತೆ ಮತ್ತೆ ಹಾಕಿಕೊಂಡು ಸಿನಿಮಾ ಮಾಡುತ್ತಾರೆ. ಇನ್ನು ಕೆಲವು ಸಂಗತಿಗಳು ಮಾರುಕಟ್ಟೆಯಲ್ಲಿ ಸೇಲ್ ಆಗುತ್ತವೆ ಎಂಬ ನಂಬಿಕೆಯ ಅಂಶಗಳನ್ನು ಹಾಕಿಕೊಂಡು ಸಿನಿಮಾ ಮಾಡುತ್ತಾರೆ. ಹಿಂದೆ ಇದ್ದ ಕಪ್ಪು–ಬಿಳುಪು ಪಾತ್ರಪೋಷಣೆಯ ಮಾದರಿಯನ್ನೇ ಇನ್ನೂ ಅನುಸರಿಸಿಕೊಂಡು ಹೋಗುತ್ತಿದ್ದಾರೆ. ಸ್ಟಾರ್ ನಟರಿಗೂ ಅದರಿಂದ ಹೊರಗೆ ಬರಲು ಭಯ' ಎನ್ನುವುದು ಹರೀಶ್ ವಿಶ್ಲೇಷಣೆ.

ನಮ್ಮ ನಾಯಕ ನಟರಿಗೆ ಹೊಸ ಪ್ರಯೋಗಗಳಿಗೆ, ಭಿನ್ನ ಆಯಾಮಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದು ಇಷ್ಟವಿಲ್ಲವೇ? ಆ ಆಸೆಯೂ ಅವರಲ್ಲಿದೆ ಎನ್ನುವುದಕ್ಕೆ ಪೂರಕವಾಗಿ ಸುದೀಪ್ ಅವರನ್ನು ಉದಾಹರಣೆಯಾಗಿ ನೀಡುತ್ತಾರೆ ಅವರು. 'ಬೇರೆ ಭಾಷೆಗಳಲ್ಲಿ ಸುದೀಪ್ ಎಷ್ಟು ಒಳ್ಳೆಯ ಸಿನಿಮಾಗಳಲ್ಲಿ, ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಆದರೆ ಅವರು ಕನ್ನಡದಲ್ಲಿ ಮಾತ್ರ 'ಹೆಬ್ಬುಲಿ', 'ದಿ ವಿಲನ್' ರೀತಿಯ ಕೆಟ್ಟ ಸಿನಿಮಾಗಳನ್ನೇಕೆ ಮಾಡುತ್ತಾರೆ?' ಎಂಬ ಉತ್ತರ ಸ್ಪಷ್ಟವಿಲ್ಲದ ಪ್ರಶ್ನೆಯನ್ನು ಮುಂದಿಡುತ್ತಾರೆ.

ಬಹುತೇಕ ಸ್ಟಾರ್ ನಟ/ನಿರ್ದೇಶಕರು ಹೇಳುವ ಮಾತು – 'ಜನರಿಗೆ ಬೇಕಾಗುವಂಥ ಸಿನಿಮಾ ಮಾಡ್ತೀವಿ'. ಇದೂ ಇನ್ನೊಂದು ಸೋಗಲಾಡಿ ನೆಪದಂತೆ ಕಾಣುತ್ತದೆ. ಈ ಮಾತಿಗೆ ಇನ್ನಷ್ಟು ಗಂಭೀರವಾಗಿ ಮುಖಾಮುಖಿಯಾಗಬೇಕು ಎಂದರೆ ಮತ್ತೆ ಕೊಂಚ ನಮ್ಮ ನೆರೆ



ಚಿತ್ರರಸಿಕರ ಗಮನ ಸೆಳೆದ ಹಿಂದಿಯ 'ಅಂಧಾದುನ್'